ಹಾಗೆಯೇ ಅದಾದ ಮೇಲೆ ಒಮ್ಮೆ ಅವನನ್ನು ಕರೆದುಕೊಂಡು ಪುನಃ ಗುತ್ತಿನ ಮೆಟ್ಟಲು ಹತ್ತಬೇಕು. ಹೂಮಾಲೆ ಹಾಕಿದ ಅಂತಕ್ಕನ ಫೋಟೊದ ಎದುರು ಗೋಪಾಲಣ್ಣನ ಕಾಲಿಗೆ ಅವನನ್ನು ಅಡ್ಡ ಬೀಳಿಸಿ, "ಇದು ನಿನ್ನನ್ನು ಉಳಿಸಿದ, ಬೆಳೆಸಿದ ಮನೆ" ಅನ್ನುವುದನ್ನು ಅವನಿಗೆ ನೆನಪಿಸಬೇಕು. ಅಷ್ಟಕ್ಕೇ ಮುಗಿಯುವುದಿಲ್ಲ. ಅಮ್ಮನ ಸಾವಿನೊಂದಿಗೆ ಸಂಪೂರ್ಣವಾಗಿ ಬಾಂಧವ್ಯವನ್ನು ತೊಡೆದುಕೊಂಡ ಅಣ್ಣ ಶೀನ ಲಾಚಾರಾಗಿ ಮಲಗಿದಲ್ಲಿ ಇರುವವನು... 'ತನ್ನ ಹೊಟ್ಟೆಯಲ್ಲಿ ಒಂದು ಹುಳವೂ ಹುಟ್ಟಲಿಲ್ಲ. ಸತ್ತರೆ ಕೊಳ್ಳಿ ಇಡುವವರು ಯಾರು?' ಎಂದು ಪ್ರತಿದಿನ ಕಣ್ಣೀರು ಇಡುತ್ತಾನಂತೆ... ಅಲ್ಲಿಯೂ ಒಮ್ಮೆ ಹೋಗಬೇಕು. ಸಣ್ಣ ಪ್ರಾಯದಲ್ಲಿ ಸಜಪೆಯ ಸಂಕ ದಾಟುವಾಗೆಲ್ಲಾ ತನ್ನನ್ನು ಜೋಪಾನವಾಗಿ ಬಿಗಿ ಹಿಡಿಯುತ್ತಿದ್ದ ಆ ಕೈಯ್ಯನ್ನು ಮುಟ್ಟಿ, "ಇಕಾ ಸತ್ತರೆ ಕೊಳ್ಳಿ ಇಡಲು ನಿನ್ನ ಅಳಿಯ ಇದ್ದಾನೆ. ಸಾಲದೇ?" ಅಂತ ಅವನಲ್ಲಿ ಕೇಳಬೇಕು. "ಆಮೇಲೆ?... ಆಮೇಲೆ?..." ಅಂತಕ್ಕ ಈಸಿಚೇರಿನ ಬೆನ್ನಿಗೆ ಇನ್ನಷ್ಟು ಬಾಗುತ್ತಾಳೆ. ಆಮೇಲೆ... ಹೌದು ಮಾಂಕು ಮೂಲ್ಯೇದಿಗೆ ಒಂದು ಪೆನ್ಶನ್ ಮಾಡಿಕೊಡಲು ರಮೇಶನಲ್ಲಿ ಹೇಳಬೇಕು. ಅವಳಿಗೆ ಪ್ರಾಯ ಅರವತ್ತಾದರೂ ಆಧಾರ್ ಕಾರ್ಡು, ವೋಟಿನ ಕಾರ್ಡು, ರೇಶನ್ ಕಾರ್ಡು ಮೂರರಲ್ಲೂ ಒಂದೊಂದು ಪ್ರಾಯ ಇದ್ದ ಕಾರಣ ಈ ಹಿಂದಿನ ಪಂಚಾಯತ್ ಸೆಕ್ರೆಟರಿ ಪೆನ್ಶನ್ ಪಾಸು ಮಾಡಲಿಲ್ಲವಂತೆ. ರಮೇಶ ಮನಸ್ಸು ಮಾಡಿದರೆ ಆದೀತು ಅಂತ ಅವಳು ಕಳೆದ ಸಾರಿ ಬಂದಾಗಲೇ ಹೇಳಿದ್ದು ರಮೇಶನಲ್ಲಿ ಹೇಳಲು ತನಗೆ ಮರ್ತೇ ಹೋಗಿತ್ತು. ಇವತ್ತು ಅದನ್ನು ನೆನಪಿನಲ್ಲಿ ಹೇಳಬೇಕು. "ಮುಂದೆ... ಇನ್ನೇನೂ ಉಳಿದಿಲ್ಲವೇ..? ಅದೇ ನಿನ್ನ ಎಡ್ಡಿ ಸೋಜರ ಆಡು... ಅದರದ್ದೇನಾದರೂ ಬಾಕಿ ಇದೆಯೇನೆ?" ಕಿವಿಯಲ್ಲಿ ಪಿಸುಗುಟ್ಟಿದ ಅಂತಕ್ಕ ಮೆಲುವಾಗಿ ನಕ್ಕಳು.

"ಮ್ಹೇ ..." ಮೂವತ್ತೈದು ವರ್ಷಗಳ ಹಿಂದೆ ಕೇಳಿದ ಆಡಿನ ಕೂಗೊಂದು ಮತ್ತೊಮ್ಮೆ ಕಿವಿಯಲ್ಲಿ ಪ್ರತಿಧ್ವನಿಸಿದಂತಾದಾಗ ಅಕ್ಕು ಪೂಜಾರ್ತಿ ಬೆಚ್ಚಿ ಕಣ್ಬಿಟ್ಟಳು. "ಮರೆತೇನೆಂದರು ಮರೆಯಲಿ ಹೇಗೆ?" ಅನ್ನುವಂತೆ ಮಯ್ಯರ ಶಾಲೆಯ ಗಂಜಿ ಕೋಣೆಯ ಕತ್ತಲ ಮೂಲೆಯಿಂದ ಚಂಗನೆ ನೆಗೆದ ಬೆಳ್ಳನೆ ಆಡು! ಅದು ತನ್ನ ಮನಸ್ಸಿನಲ್ಲಿ ಎಷ್ಟು ಭದ್ರವಾಗಿ ಅಚ್ಚೊತ್ತಿದೆ ಅನ್ನುವುದು ಗೊತ್ತಾದದ್ದು ಕಳೆದ ತಿಂಗಳು ಎಡ್ಡಿ ಸೋಜರ ಮಗ ಆಂಡ್ರ್ಯೂ ರಮೇಶನನ್ನು ನೋಡ ಬಂದಾಗಲೇ! ಆದಿತ್ಯವಾರ ಸಂಜೆ ಸಿಟೌಟಿನ ಬದಿಯ ರಮೇಶನ ಆಫೀಸು ಕೋಣೆಯಿಂದ ಹೊರ ಬಂದ ಟಾಕುಟೀಕಿನ ಯುವಕ ಈಸಿಚೇರಿನಲ್ಲಿ ಕುಳಿತ ತನ್ನ ಕಾಲು ಮುಟ್ಟಿ, "ಆಶೀರ್ವಾದ ಮಾಡಿ ಅಮ್ಮ" ಎಂದಾಗ ಒಂದರೆ ಕ್ಷಣ ತಬ್ಬಿಬ್ಬಾಗಿದ್ದಳು ಅಕ್ಕು ಪೂಜಾರ್ತಿ. ಅವಳ ಗಲಿಬಿಲಿ ಗಮನಿಸಿದ ರಮೇಶ ನಗುತ್ತಾ, "ಅಮ್ಮನಿಗೆ ಅಂದಾಜಾಗಲಿಲ್ಲವ? ಇದು ನಮ್ಮ ಎಡ್ಡಿ ಸೋಜರ ಮಗ... ನನ್ನ ಕ್ಲಾಸ್ಸಿನಲ್ಲಿ ಇದ್ದನಲ್ಲ ಆಂಡ್ರ್ಯೂ... ಅವತ್ತು ನಾವೆಲ್ಲಾ ಶಾಲೆ ಕಳ್ಳ ಅಂತ ತಮಾಷೆ ಮಾಡುತ್ತಿದ್ದೇವಲ್ಲ. ಈಗ ಶಾರ್ಜಾದ ದೊಡ್ಡ ಸಾಹುಕಾರ. ನಮ್ಮ ಗುತ್ತಿನ ಜಾಗ ತೆಗೆದು ಕೊಂಡಿದ್ದನಲ್ಲ. ಅದರಲ್ಲಿ ದೊಡ್ಡ ಇಂಗ್ಲಿಷ್ ಮೀಡಿಯಂ ಶಾಲೆ ಕಟ್ಟಿಸಿದ್ದಾನೆ. ಬರುವ ತಿಂಗಳೇ ಓಪನಿಂಗ್. ಆ ಬಗ್ಗೆ ಮಾತನಾಡಲು ಬಂದವ..." ರಮೇಶ ಹೇಳುತ್ತಿದ್ದಂತೆ ಒಮ್ಮೆಲೇ ಮಂಪರಿನಿಂದ ಎಚ್ಚೆತ್ತಂತೆ ಅಕ್ಕು ಪೂಜಾರ್ತಿ ದಿಢೀರನೆ ಕೇಳಿದ್ದಳು, "ಎಡ್ಡಿ ಸೋಜರ ಆಡು ಈಗ ಹೇಗಿದೆ ಮಗಾ?" ಗಲಿಬಿಲಿ ಗೊಂಡಿದ್ದ ಆಂಡ್ರ್ಯೂ, "ಅದೂ..." ಅಂತ ತಡವರಿಸುವಷ್ಟರಲ್ಲೇ ರಮೇಶ, "ಸೋರಿ ಆಂಡ್ರ್ಯೂ... ಅಮ್ಮನಿಗೆ ಮಾತ್ರೆ ಪವರಿಗೆ ಒಂಚೂರು ಅಮಲು. ಸರಿ ಕಾಣುವ. ನಾಳೆ ಆಫೀಸಿಗೆ ಬಾ. ಪೇಪರ್ ರೆಡಿ ಮಾಡಿಡಲು ಹೇಳುತ್ತೇನೆ" ಎಂದಿದ್ದ. ಆಂಡ್ರ್ಯೂ ಗೇಟು ದಾಟುವುದೇ ತಡ. ರಮೇಶ ಮತ್ತು ಮಾಲಿ ಬಿದ್ದು ಬಿದ್ದು ನಕ್ಕಿದ್ದರು. "ಅಮ್ಮನದ್ದು ಒಳ್ಳೆ ಕತೆ. ತುಂಬಾ ಕಾಲದ ಮೇಲೆ ಕಂಡವನತ್ರ ಎಡ್ಡಿ ಸೋಜರು ಹೇಗಿದ್ದಾರೆ? ಎಂದು ಕೇಳುವುದು ಬಿಟ್ಟು ಸೋಜರ ಆಡಿನ ಕತೆ ಕೇಳಿದೆಯಲ್ಲಾ?... ಅವ ಏನು ತಿಳಿದುಕೊಂಡನೋ ಏನೋ?..." ಅಕ್ಕು